ಮೂಲ ದಾವಾ ನಂಃ 17/2023

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **23.07.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಆರ್ 1 ರಿಂದ 8 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ಎಷ್ಟನೇ ಇಸ್ವಿಯಲ್ಲಿ ಜನಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ಕೊಳಗಿ ಗ್ರಾಮದಲ್ಲಿ ಜನಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ದಾವಾಸ್ತಿ ಸ.ನಂ 32 ಆಗಿರುತ್ತದೆ. ದಾವಾಸ್ತಿಯ ಚೆಕ್ ಬಂದಿಯು ಪೂರ್ವಕ್ಕೆ ಸಾವಕ್ಕ ಕಟ್ಲೇರರವರ ಜಮೀನು ಇದ್ದು , ಪಶ್ಚಿಮಕ್ಕೆ ಪುಟ್ಟಪ್ಪ ಹರಿಜನರವರ ಜಮೀನು ಇದ್ದು , ದಕ್ಷೀಣಕ್ಕೆ ಕೆರೆ ಮತ್ತು ಉತ್ತರಕ್ಕೆ ಫಾರೆಸ್ಟ್ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಈಗ ದಾವಾಸ್ತಿಯು ನಮ್ಮ ಮಾವನವರ ಹೆಸರಿನಲ್ಲಿರುತ್ತದೆ. ದಾವಾಸ್ತಿಯನ್ನು ನಾವು ಮತ್ತು ಅವರು ಇಬ್ಬರು ಸಾಗುವಳಿ ಮಾಡುತ್ತಿದ್ದೇವು. ದಾವಾಸ್ತಿಯು ಈಗ ಅಜ್ಜಪ್ಪ ಶಿವಪ್ಪ ಮತ್ತು ಗಂಗವ್ವ ಅವರ ಹೆಸರಿನಲ್ಲಿದೆ ಎಂದರೆ ಹೌದು. ಸದರಿ ಅಜ್ಜಪ್ಪ ಶಿವಪ್ಪ ಮತ್ತು ಗಂಗವ್ವರವರಿಗೆ ದಾವಾಸ್ತಿಯು ವಾಂಟಣಿ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾಂಟಣಿಯಲ್ಲಿ ಬಂದ ಹಿಸ್ತೆಯ ಪ್ರಕಾರ ಸದರಿಯವರ ಹೆಸರು ದಾವಾಸ್ತಿಯ ಪಹಣಿ ಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಹೌದು. ಅದರ ಪ್ರಕಾರ ಕಂದಾಯ ಅಧಿಕಾರಿಗಳು , ಮ್ಯೂಟೇಷನ್ ಸಂಖ್ಯೆ ಎಂ.ಆರ್ 07/2007-08 ನ್ನು ದಾಖಲು ಮಾಡಿರುತ್ತಾರೆ ಎಂದರೆ , ದಾಖಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿ ನಮ್ಮ ಅಜ್ಜನವರಿಗೆ ಹೇಗೆ ಬಂತು ಎಂದು ನಮಗೆ ಗೊತ್ತಿಲ್ಲ. ನಮ್ಮ ಅಜ್ಜನವರಿಗೆ ದಾವಾಸ್ತಿಯು ಹೇಗೆ ಬಂತು ಎಂಬುದರ ಬಗ್ಗೆ ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮೂಲ ಪುರುಷ ಈರಪ್ಪ ಹರಿಜನ ಯಾವಾ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ನಾವು ಸಣ್ಣವರಿದ್ದಾಗ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮೂಲ ಪುರುಷ ಈರಪ್ಪನಿಗೆ ಫಕೀರವ್ವ, ಬಸಪ್ಪ , ಯಲ್ಲವ್ವ , ಅಜ್ಜಪ್ಪ , ಕಾಳವ್ವ ಮತ್ತು ಶಿವಪ್ಪ ಎನ್ನುವ ಮಕ್ಕಳಿದ್ದರು.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 8 ನೇ ಪ್ರತಿವಾದಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**